## ಪ್ರಧಾನ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಕ್ರಿ.ಮಿ ನಂಃ 3347/ 2024**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ದೇವಪ್ಪ | ಆರ್.ಡಬ್ಲೂ **-01** |
| ತಂದೆ ಹೆಸರುಃ | ಶರಣಪ್ಪ | |
| ವಯಸ್ಸುಃ | **35** ವರ್ಷ | ದಿಃ **07-03-2026** |
| ಉದ್ಯೋಗಃ | ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬಳವಡಗಿ ಗ್ರಾಮ | |

ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಆರ್.ಆರ್.ಆರ್ ವಕೀಲರಿಂದ ಃ

ಈಗ 15 ವರ್ಷಗಳ ಹಿಂದೆ 1 ನೇ ಅರ್ಜಿದಾರಳೊಂದಿಗೆ ನನ್ನ ಮದುವೆ ಆಗಿರುತ್ತದೆ. ಕಂಚೋಳ ಗ್ರಾಮದ ನಮ್ಮ ಮನೆ ದೇವರಾದ ಹನುಮಾನ್ ದೇವಸ್ಥಾನದಲ್ಲಿ ನಮ್ಮ ಮದುವೆ ಆಗಿರುತ್ತದೆ. ಮದುವೆ ಖರ್ಚು-ವೆಚ್ಚಗಳನ್ನು ನಾವೇ ಭರಿಸಿದ್ದು, ಮದುವೆ ಸಮಯದಲ್ಲಿ 1 ನೇ ಅರ್ಜಿದಾರಳಿಗೆ ಒಂದು ತೊಲೆಯ ಬಂಗಾರದ ಮಾಂಗಲ್ಯ ಸರ, ಅರ್ಧ ತೊಲೆಯ ಬಂಗಾರದ ಕಿವಿಯೋಲೆ, ಒಂದು ಜೊತೆ ಬೆಳ್ಳಿ ಕಾಲು ಚೈನು ಹಾಗೂ 11 ಒಳ್ಳೆಯ ಸೀರೆಗಳನ್ನು ಕೊಟ್ಟಿದ್ದೆವು. ಹೀಗಾಗಿ ಮದುವೆಗೆ ಒಂದುವರೆಯಿಂದ ಎರಡುವರೆ ಲಕ್ಷ ಹಣ ಖರ್ಚಾಗಿರುತ್ತದೆ.

2. ಮದುವೆಯಾದ ನಂತರ 1 ನೇ ಅರ್ಜಿದಾರಳು ದಾಂಪತ್ಯ ಜೀವನ ನಡೆಸಲು ನಮ್ಮ ಮನೆಗೆ ಬಂದಿದ್ದರು. ಆ ನಂತರ 4-5 ವರ್ಷಗಳ ವರೆಗೆ ನಾವುಗಳು ಚೆನ್ನಾಗಿದ್ದು ನಮಗೆ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಆ ನಂತರ 1 ನೇ ಅರ್ಜಿದಾರಳು ಸಣ್ಣ-ಸಣ್ಣ ವಿಷಯಗಳಿಗೆ ಜಗಳ ಮಾಡುವುದು ಹಾಗೂ ನನಗೆ ಮತ್ತು ನನ್ನ ತಂದೆ-ತಾಯಿಗೆ ಬೈಯುವುದು ಮಾಡುತ್ತಿದ್ದಳು ಮತ್ತು 2-3 ಸಲ ತವರು ಮನೆಗೆ ಹೋಗಿದ್ದಳು. ಆದ್ದರಿಂದ ನಾನು ನನ್ನ ದೊಡ್ಡಪ್ಪ ಹಾಗೂ ಇತರರನ್ನು ಕರೆದುಕೊಂಡು ಯಾದಗಿರಿ ಹಾಗೂ ಬಳವಡಗಿ ಗ್ರಾಮದಲ್ಲಿ ನ್ಯಾಯ ಪಂಚಾಯಿತಿ ಮಾಡಿಸಿದ್ದೆನು. ಆದರೆ 1 ನೇ ಅರ್ಜಿದಾರಳು ನನ್ನೊಂದಿಗೆ ಜೀವನ ನಡೆಸಲು ಬಂದಿರುವುದಿಲ್ಲ. ಆ ನಂತರ ನನ್ನ ದೊಡ್ಡಪ್ಪ ಹಾಗೂ ಇತರರು ಹೇಳಿದ್ದರಿಂದ 1 ನೇ ಅರ್ಜಿದಾರಳು ನಮ್ಮ ಮನೆಗೆ ಬಂದು 08 ದಿನಗಳಿಂದ 01 ತಿಂಗಳ ವರೆಗೆ ನನ್ನೊಂದಿಗೆ ಇದ್ದು

ಮತ್ತೆ ಅದೇ ರೀತಿ ಗಲಾಟೆ ಮಾಡಿ ಬೆಂಗಳೂರಿಗೆ ಹೋಗಿದ್ದಳು. ನಾನು ಬೆಂಗಳೂರಿಗೆ ಹೋಗಿ 1 ನೇ ಅರ್ಜಿದಾರಳನ್ನು ಕರೆದಾಗ ನನ್ನ ತಂದೆ-ತಾಯಿಯನ್ನು ಬಿಟ್ಟು ಬರುವಂತೆ ಹೇಳಿರುತ್ತಾಳೆ. ಅದಕ್ಕೆ ನಾನು ಒಪ್ಪದಿದ್ದಾಗ 1 ನೇ ಅರ್ಜಿದಾರಳು ಹಾಗಾದರೆ ನೀನು ನನಗೆ ಬೇಕಾಗಿಲ್ಲ, ನನ್ನ ಮಕ್ಕಳನ್ನು ನಾನೇ ನೋಡಿಕೊಳ್ಳುತ್ತೇನೆ ಹಾಗೂ ನಿನಗೆ ವಿವಾಹ ವಿಚ್ಛೇದನೆ ಕೊಡುತ್ತೇನೆ ಎಂದು ಹೇಳಿರುತ್ತಾಳೆ. ಆ ನಂತರವೂ ಸಹ ನಾನು ಕರೆ ಮಾಡಿದಾಗ ಅರ್ಜಿದಾರಳು ನನಗೆ ಬೈಯುತ್ತಿದ್ದಳು. ಆದ್ದರಿಂದ ನಾನು ವಕೀಲರ ಮೂಲಕ 1 ನೇ ಅರ್ಜಿದಾರಳಿಗೆ ನೋಟಿಸ್ ಕಳುಹಿಸಿದ್ದೆನು. ಸದರಿ ನೋಟಿಸಿಗೆ 1 ನೇ ಅರ್ಜಿದಾರಳು ಉತ್ತರ ನೀಡಿಲ್ಲ. ಆದ್ದರಿಂದ ನಾನು ಚಿತ್ತಾಪೂರದ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ದಾಖಲು ಮಾಡಿದ್ದೇನೆ. ಆ ನಂತರ 3 ನೇ ತಾರೀಖಿನಂದು 1 ನೇ ಅರ್ಜಿದಾರಳು ಸದರಿ ಪ್ರಕರಣದಲ್ಲಿ ಹಾಜರಾಗಿರುತ್ತಾಳೆ. ಆ ನಂತರ 1 ನೇ ಅರ್ಜಿದಾರಳು ನನ್ನ ವಿರುದ್ದ ಈ ಪ್ರಕರಣ ದಾಖಲಿಸಿದ್ದಾಳೆ.

3. ನಾನು ಈಗ ನನ್ನ ತಾಯಿಯೊಂದಿಗೆ ವಾಸವಾಗಿದ್ದು, ನನ್ನ ತಮ್ಮ ಬೆಂಗಳೂರಿನಲ್ಲಿ ವಾಸವಾಗಿದ್ದಾನೆ. ನನ್ನ ತಾಯಿಗೆ 60-70 ವರ್ಷ ವಯಸ್ಸಾಗಿದೆ. ನನ್ನ ತಾಯಿಗೆ ಮೊಣಕಾಲು ನೋವು ಇರುವುದರಿಂದ ತಿಂಗಳಲ್ಲಿ ಎರಡು ಸಲ ಚಿಕಿತ್ಸೆ ಕೊಡಿಸಬೇಕಾಗುತ್ತದೆ. ಈಗ ನನ್ನ ತಾಯಿಯೇ ಮನೆಗೆಲಸ ಹಾಗೂ ಅಡುಗೆ ಮಾಡುತ್ತಿದ್ದಾಳೆ.

4. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಬಲಗಣ್ಣು ದೃಷ್ಟಿ ಹೋಗಿದ್ದು, ಅಪಘಾತದಲ್ಲಿ ನನ್ನ ಬಲಗಾಲಿಗೆ ಗಾಯ ಆಗಿದ್ದರಿಂದ ನನಗೆ ಭಾರದ ವಸ್ತು ಎತ್ತಲು ಆಗುವುದಿಲ್ಲ. ನಮ್ಮ ಕುಟುಂಬಕ್ಕೆ 04 ಎಕರೆ ಬಂಜರು ಭೂಮಿ ಇದ್ದು ಅದರಲ್ಲಿ ನನಗೆ ಹಾಗೂ ನನ್ನ ತಮ್ಮನಿಗೆ ಸಮಪಾಲು ಇರುತ್ತದೆ. ಸದರಿ ಭೂಮಿಯಲ್ಲಿ ಯಾವುದೇ ಬೆಳೆ ಬರುವುದಿಲ್ಲ. ನನಗೆ ದುಡಿಯುವ ಸಾಮಾರ್ಥ್ಯ ಇಲ್ಲದಿರುವುದರಿಂದ ಅರ್ಜಿದಾರರಿಗೆ ಜೀವನಾಂಶ ಪಾವತಿ ಮಾಡಲು ಆಗುವುದಿಲ್ಲ. ನಾನು ಅರ್ಜಿದಾರರನ್ನು ಈಗಲೂ ನನ್ನೊಂದಿಗೆ ಕರೆದುಕೊಂಡು ಹೋಗಲು ತಯಾರಿದ್ದೇನೆ ಹಾಗೂ ಅವರು ನನ್ನನ್ನು ಕರೆದುಕೊಂಡು ಹೋದರೆ ಅವರೊಂದಿಗೂ ನಾನು ಹೋಗಲು ತಯಾರಿದ್ದೇನೆ. ನಾನು 1 ನೇ ಅರ್ಜಿದಾರಳಿಗೆ ಹೊಡಿ-ಬಡಿ ಮಾಡಿಲ್ಲ ಹಾಗೂ ಯಾವುದೇ ಕಿರುಕುಳ ನೀಡಿಲ್ಲ. ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡವಂತೆ ಕೋರಿಕೊಳ್ಳುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.